# <u>1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು</u>

## <u>ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ</u>

**MVC**-725/2022 **PW**: 4

**ದಿಃ 30.11.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 4 ನೇ ಎದುರುದಾರ ಪರ ಶ್ರೀ ಎಸ್ ಜೆ ಬಿ ವಕೀಲರಿಂದ ಃ**

**3.** ನಾನು ಬಿಕಾಂ ಪದವೀಧರಳಾಗಿರುತ್ತೇನೆ. ನಾನು ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದೇನೆ. ನಾನು ಅರ್ಜಿಯನ್ನು ಹಾಕಲು ಮಾಹಿತಿಯನ್ನು ನನ್ನ ವಕೀಲರಾದ ಶ್ರೀ ಆಂಜನೇಯ ವಕೀಲರಿಗೆ ಕೊಟ್ಟಿರುತ್ತೇನೆ. ನಾನು ದಿನಾಂಕಃ 27.11.1974 ರಲ್ಲಿ ಜನಿಸಿರುತ್ತೇನೆ. ನಾನು ನನ್ನ ಜನ್ಮ ದಿನಾಂಕವನ್ನು ತೋರಿಸಲು ಯಾವದೇ ದಾಖಲೆಗಳನ್ನು ಕೊಟ್ಟಿಲ್ಲ ಆದರೆ ಆದಾರ ಕಾರ್ಡ ಕೊಟ್ಟಿರುತ್ತೇನೆ. ತಮ್ಮ ವಯಸ್ಸು ಅಪಘಾತದ ಸಮಯದಲ್ಲಿ 48 ಆಗಿತ್ತು ಎಂದು ತಿಳಿಸಿರುವದು ಸುಳ್ಳು ಎಂದರೆ ಸರಿಯಲ್ಲ. ನಾನು ಈಗ ದಾರವಾಡದ ಕೆ ಇ ಬೋರ್ಡ ನಲ್ಲಿರುವ ಸೆಂಟ್ರಲ ಸ್ಕೂಲನಲ್ಲಿ ಸಹಶಿಕ್ಷಕಿ ಎಂದು ಕೆಲಸ ಮಾಡುತ್ತಿದ್ದೇನೆ. ಸದರಿ ಸಂಸ್ಥೆಯು ಖಾಸಗಿ ಸಂಸ್ಥೆಯಾಗಿದ್ದು ಸರಕಾರದಿಂದ ಯಾವದೇ ಸವಲತ್ತು ಸಿಗುವದಿಲ್ಲ ಎಂದರೆ ಸರಿ. 2014 ರಿಂದ ನಾನು ಸದರಿ ಶಾಲೆಯಲ್ಲಿ ಸಹಶಿಕ್ಷಕಿಯಾಗಿ ಕೆಲಸ ಮಾಡುತ್ತಾ ಬಂದಿರುತ್ತೇನೆ. ಇದಕ್ಕಿಂತ ಪೂರ್ವದಲ್ಲಿ ನಾನು ದಾರವಾಡದ ಪವನ ಇಂಗ್ಲೀಷ ಮೀಡಿಯಂ ಸ್ಕೂಲ , ಕೆ ಪಿ ಇ ಎಸ್ ಶಾಲೆಯಲ್ಲಿ ಸಹ ಶಿಕ್ಷಕಿಯಾಗಿ ಕೆಲಸ ಮಾಡಿದ್ದೆ. ಕೆ ಇ ಬೋರ್ಡಗೆ ಸಹಶಿಕ್ಷಕಿಯಾಗಿ ಸೇರಿದೆ ಎಂದು ತೋರಿಸಲು ಯಾವದೇ ಅಪಾಯಂಟಮೆಂಟ ಆರ್ಡರ ಹಾಗೂ ಸಂಬಳದ ಚೀಟಿಗಳನ್ನು ಹಾಜರುಪಡಿಸಿರುವದಿಲ್ಲ ಎಂದರೆ ಸರಿಯಲ್ಲ. ತಾವು 15400/- ರೂ ಗಳನ್ನು ಸಂಬಳ ಪಡೆಯುತ್ತಿದ್ದೀರಿ ಎಂದು ತೋರಿಸಲು ಸಾಕ್ಷಿಯು ಸಂಬಳ ಚೀಟಿ ಕೊಟ್ಟಿರುತ್ತೇನೆಂದು ನುಡಿಯುತ್ತಾರೆ.

4. ಅಪಘಾತವು ದಿಃ20.03.2022 ರಂದು ಆಗಿರುತ್ತದೆ. ನಾವು ದಾರವಾಡದಿಂದ ಮಂತ್ರಾಲಯಕ್ಕೆ ಹೋಗಿದ್ದು ವಾಪಸು ಬರಬೇಕಾದರೆ ಅಂದರೆ ಕೊಪ್ಪಳದಿಂದ ಬರಬೇಕಾದರೆ ಅಪಘಾತವಾಗಿರುತ್ತದೆ. ನಾವು ಇನ್ನೋವಾ ಕಾರನಲ್ಲಿ ಹೋಗುತ್ತಿದ್ದೆವು. ಸದರಿ ಕಾರಿನಲ್ಲಿ ಒಟ್ಟು 7 ಜನ ಪ್ರಯಾಣಿಸುತ್ತಿದ್ದೆವು. ನಮ್ಮ ಮಗನ ಹೆಸರು ಶ್ರೀಪೂರ್ಣ ಎಂದರೆ ಸರಿ. ಈ ವ್ಯಕ್ತಿಯೇ ದೂರನ್ನು ಕೊಟ್ಟಿರುತ್ತಾರೆಂದರೆ ಸರಿ. ಅವರು ನೀಡಿದ ದೂರಿನ ವಿಚಾರಗಳು ಗೊತ್ತಿರುತ್ತವೆ. ಸದರಿ ದೂರಿನಲ್ಲಿರುವ ಎಲ್ಲಾ

ವಿಚಾರಗಳು ಸತ್ಯ ಸಂಗತಿಯಿಂದ ಕೂಡಿರುತ್ತವೆ. ಸಾಕ್ಷಿಗೆ ನಿಪಿ 2 ನ್ನು ಓದಿ ತಿಳಿಸಿದಾಗ ಸಾಕ್ಷಿಯು ಅಂಶಗಳನ್ನು ಕೇಳಿ ಸರಿ ಇರುತ್ತವೆಂದು ನುಡಿಯುತ್ತಾರೆ. ತಮ್ಮ ಮಗ ಶ್ರೀಪೂರ್ಣ ರವರು ದೂರಿನಲ್ಲಿ ಕಾರಿನ ಚಾಲಕನ ತಪ್ಪಿನಿಂದ ಅಪಘಾತವಾಗಿದೆ ಎಂದು ತಿಳಿಸಿರುತ್ತಾರೆಂದರೆ ಸರಿ.

5. ನಾನು ಕಾರಿನ ಹಿಂಬಾಗದಲ್ಲಿ ಕುಳಿತಿದ್ದೆ. ಹಿಂದೆ ಕುಳಿತಿದ್ದರೂ ಮುಂದೆ ಆಗುವ ಸಂಗತಿಗಳು ಗೊತ್ತಾಗುತ್ತಿದ್ದು ತಶಮಗೆ ಚಾಲಕ ಯಾವ ರೀತಿ ಚಾಲನೆ ಮಾಡುತ್ತಿದ್ದ ಎಂಬ ಬಗ್ಗೆಗೊತ್ತಾಗುತ್ತಿತ್ತು ಎಂದರೆ ಸರಿ. ಚಾಲಕನ ಪಕ್ಕದಲ್ಲಿನನ್ನ ಮನೆಯವರು ಕುಳಿತಿದ್ದರು. ನಾವು ಕಾರಿನ ಚಾಲಕನಿಗೆ ಜೋರಾಗಿ ಚಲಾಯಿಸಬೇಡ ನಿಧಾನವಾಗಿ ಚಲಾಯಿಸಿ ಎಂದು ತಿಳಿಸಿದ್ದೆವು.

6. ಅಪಘಾತ ರಸ್ತೆಯು ರಾಷ್ಟೀಯ ಹೆದ್ದಾರಿಯಾಗಿರುತ್ತದೆಂದರೆ ಸರಿ. ಸದರಿ ರಸ್ತೆಯು ಚತುಷ್ಪತ ರಸ್ತೆಯಾಗಿತ್ತು ಎಂದರೆ ಸರಿ. ರಸ್ತೆಯ ಅಗಲವು ತಲಾ 15 ಅಡಿ ಅಗಲ ಇತ್ತು ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ಮಹಜರನ್ನು ನೋಡಿ ಹೌದು ಎನ್ನುತ್ತಾರೆ. ರಾಷ್ಟೀಯ ಹೆದ್ದಾರಿಗಳಲ್ಲಿ ವಾಹನ ಸಂಚಾರ ಹೆಚ್ಚಾಗಿರುತ್ತದೆಂದರೆ ಸರಿ. ಅಪಘತವಾದ ರಸ್ತೆಯ ಎಡಬಾಗದಲ್ಲಿ ಭಾರತ ಪೆಟ್ರೋಲ ಪಂಪ ಇತ್ತು ಎಂದರೇ ಸರಿ. ಸದರಿ ಪಂಪ 24 ಘಂಟೆ ಚಾಲೂ ಇರುತ್ತದೆಂದರೆ ಸರಿ. ಸದರಿ ಪೆಟ್ರೋಲ ಪಂಪ ಸುತ್ತಮುತ್ತಲೂ ಸಾಕಷ್ಟು ಬೀದಿ ದೀಪಗಳು ಇರುತ್ತವೆಂದರೆ ಸಾಕ್ಷಿಯು ನಾನು ಅಷ್ಟಾಗಿ ಗಮನಿಸಲಿಲ್ಲ ಎನ್ನುತ್ತಾರೆ. ಸದರಿ ಪೆಟ್ರೋಲ ಪಂಪ ಬಳಿ ಲೈಟ ಇತ್ತು ಎಂದರೇ ಸಾಕ್ಷಿಯು ನಾನು ಅಪಘಾತವಾದ ನಂತರ ಕೆಳಗೆ ಇಳಿದು ನಂತರ ಸದರಿ ಲೈಟ ನೋಡಿರುತ್ತೇವೆ ಎನ್ನುತ್ತಾರೆ. ಪ್ರತಿಯೊಬ್ಬ ಚಾಲಕನಿಗೂ ಆತನ ಲೈಟನಿಂದ 200 ಮೀಟರ ದೂರದಲ್ಲಿರುವ ವಾಹನವು ಸಹ ಗೊತ್ತಾಗುತ್ತದೆಂದರೆ ಸಾಕ್ಷಿಯು ಗೊತ್ತಾಗಬಹುದು ಆದರೆ ನನಗೆ ಚಾಲನೆ ಬಗ್ಗೆ ಅಷ್ಟೊಂದು ಮಾಹಿತಿ ಇಲ್ಲ ಎನ್ನುತ್ತಾರೆ. ಲಾರಿಯು ಪೆಟ್ರೋಲ ಪಂಪನ ಮುಂಬಾಗದಲ್ಲಿ ಇತ್ತು ಎಂದರೆ ಸಾಕ್ಷಿಯು ನಾನು ನಿದ್ದೆ ಮಂಪರನಲ್ಲಿದ್ದು ನನಗೆ ಅದು ಎಲ್ಲಿತ್ತು ಎಂದು ಗೊತ್ತಾಗಲಿಲ್ಲ ಹಾಗೂ ಅಪಘಾತವಾದ ನಂತರ ನನ್ನ ಮಾನಸಿಕ ಸ್ಥಿತಿಯು ಅಕ್ಕಪಕ್ಕದಲ್ಲಿ ಏನಿದೆ ಎಂದು ತಿಳಿಯುವಷ್ಟು ಸಾಮರ್ಥದಿಂದ ಕೂಡಿರಲಿಲ್ಲ ಎನ್ನುತ್ತಾರೆ. ನಾನು ಪೊಲೀಸ ದಾಖಲೆಗಳ ಮೇಲೆ ಅರ್ಜಿಯನ್ನು ಸಲ್ಲಿಸಿರುತ್ತೀರಿ ಎಂದರೆ ಸರಿ. ನಮ್ಮ ಚಾಲಕ ಸ್ಕಾರಪಿಯೋ ವಾಹನವನ್ನು ತಪ್ಪಿಸಲು ಲಾರಿಗೆ ಡಿಕ್ಕಿಪಡಿಸಿರುತ್ತಾರೆಂದರೆ ಸರಿ. ತಾವು ಹಾಜರುಪಡಿಸಿರುವ ಸ್ಕೆಚ್ಚನ್ನು ನೋಡಿ ಅಪಘಾತ ಯಾವ ರೀತಿ ಆಯಿತು ಎಂದು ಹೇಳಬಹುದಾ ಎಂದರೆ ಸಾಕ್ಷಿಯು ಗೊತ್ತಾಗುತ್ತಿಲ್ಲ ಎನ್ನುತ್ತಾರೆ. ಲಾರಿಯು ಪೆಟ್ರೋಲ ಪಂಪನ ಆವರಣದಲ್ಲಿ ಇತ್ತು ಎಂದರೆ ಸಾಕ್ಷಿಯು ರಸ್ತೆಯಲ್ಲಿತ್ತು ಎಂದು ನುಡಿಯುತ್ತಾರೆ. ತಮ್ಮ ವಾಹನದ ಚಾಲಕ ಲಾರಿಯ ಹಿಂಬಾಗದ ಬಲಬಾಗದ ಲೈಟಗೆ ಡಿಕ್ಕಿಪಡಿಸಿರುತ್ತಾರೆಂದರೆ ಗೊತ್ತಿಲ್ಲ. ಕಾರು ಚಾಲಕನ ಮೇಲೆ

ಪೊಲೀಸರು ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆಂದರೆ ಸರಿ. ಒಂದು ವೇಳೆ ಲಾರಿಯು ಇರದಿದ್ದರೆ ತಮ್ಮ ವಾಹನದ ಚಾಲಕ ಪೆಟ್ರೋಲ ಪಂಪನ ಆವರಣಕ್ಕೆ ಡಿಕ್ಕಿಪಡಿಸುತ್ತಿದ್ದರು ಎಂದರೆ ಸಾಕ್ಷಿಯು 2 ಇಂಚಿನ ಕಲ್ಲು ಇರಬಹುದು ನಾನು ಗಮನಿಸಲಿಲ್ಲ ಎನ್ನುತ್ತಾರೆ. ಲಾರಿಯು ಪೆಟ್ರೋಲ ಪಂಪನ ಆವರಣದಲ್ಲಿ ಇದ್ದ ಕಾರಣ ಸಾವು ನೋವು ಕಡಿಮೆಯಾಗಿರುತ್ತದೆಂದರೆ ಸರಿಯಲ್ಲ. ತಾವು ತಮಂ ಅರ್ಜಿಯಲ್ಲಿ ಮತ್ತು ಸಾಕ್ಷ್ಯದಲ್ಲಿ ತಿಳಿಸಿರುವಂತೆ ಲಾರಿ ಚಾಲಕ ಯಾವದೇ ಮುನ್ಸೂಚನಾ ದೀಪಗಳನ್ನು ಹಾಕದೇ ಹಾಗೂ ಯಾವದೇ ಸೂಚನೆ ಇಲ್ಲದೇ ನಿಲ್ಲಿಸಿದ್ದ ಎಂದು ತಿಳಿಸಿರುವದು ಸುಳ್ಳು ಎಂದರೆ ಸರಿಯಲ್ಲ. ಅಪಘಾತವು ಸಂಪೂರ್ಣವಾಗಿ ಕಾರು ಚಾಲಕನ ತಪ್ಪಿನಿಂದ ಆಗಿದ್ದರೂ ತಾವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

7. ತಮಗೆ ಆಸ್ಪತ್ರೆಯಲ್ಲಿ ಒಳ್ಳೇ ಚಿಕಿತ್ಸೆ ನೀಡಿ ಬಿಡುಗಡೆ ಮಾಡಿರುತ್ತಾರೆಂದರೆ ಸರಿ. ತಮಗೆ ಈಗ ಯಾವದೇ ರೀತಿಯ ತೊಂದರೆ ಇಲ್ಲ ಎಂದರೆ ಸರಿಯಲ್ಲ. ತಾವು ಮೊದಲಿನಂತೆ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದು ತಮ್ಮ ಸಂಬಳದಲ್ಲಿ ಯಾವದೇ ರೀತಿಯ ಕಡಿಮೆಯಾಗಿಲ್ಲ ಎಂದರೆ ಸರಿ. ತಾವು ತಮ್ಮ ಮುಖ್ಯ ವಿಚಾರಣೆಯ 4 ನೇ ಪ್ಯಾರಾದಲ್ಲಿ ತಿಳಿಸಿರುವ ರೀತಿ 4000/- ಗಳನ್ನು ಕೆಲಸದಾಕಿಗೆ ನೀಡುತ್ತಿದ್ದೀರಿ ಎಂದು ತಿಳಿಸಿರುವದು ಸುಳ್ಳು ಎಂದರೆ ಸರಿಯಲ್ಲ. ತಾವು ಮುಂದಿನ ಚಿಕಿತ್ಸೆಗಾಗಿ ಹಣದ ಅಗತ್ಯ ಇದೆ ಎಂದು ತಿಳಿಸಿರುವದು ಸುಳ್ಳು ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶಕ್ಕಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಲಾರಿಗೆ ಪರ್ಮಿಟ ಮತ್ತು ಚಾಲಕನಿಗೆ ಚಾಲನಾ ಪತ್ರ ಇರದ ಕಾರಣ 4 ನೇ ಎದುರುದಾರರು ಪರಿಹಾರ ಕೊಡಲು ಬಾದ್ಯಸ್ಥರು ಅಲ್ಲ ಎಂದರೆ ಸರಿಯಲ್ಲ.

8. ತಾವು ಸುಳ್ಳು ದಾಖಲೆಗಳನ್ನು ಹಾಜರುಪಡಿಸಿರುತ್ತೀರಿ ಎಂದರೆ ಸರಿಯಲ್ಲ. ಅಪಘಾತವು 2022 ರಲ್ಲಿ ಆಗಿದ್ದು ತಾವು ನಿಪಿ 52 ರ ಕೊನೆಯ ಪುಟದ ದಾಖಲೆಯನ್ನು ಅಂದರೆ ದಿನಾಂಕಃ07.07.2023 ರಂದು ನೀಡಿರುವ ಮೆಡಿಕಲ್ಲ ದಾಖಲೆಯನ್ನು ಈ ಕೇಸಗೋಸ್ಕರ ಸೃಷ್ಟಿಸಿಕೊಂಡು ಹಾಜರುಪಡಿಸಿರುತ್ತೀರಿ ಎಂದರೆ ಸರಿಯಲ್ಲ. ತಾವು ಹಾಜರುಪಡಿಸಿರುವ ಬಿಡುಗಡೆ ಸಾರಾಂಶ ಪತ್ರದ ಪ್ರಕಾರ ಅವರು ಗುಣಮುಖರಾದ ನಂತರ ಬಿಡುಗಡೆ ಮಾಡಲಾಗಿದೆ ಎಂದು ಉಲ್ಲೇಖಿಸಲಾಗಿದೆ ಎಂದರೆ ಸರಿಯಲ್ಲ. ತಾವು ತಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಎಲಸ್ ಡಿ ಎಂ ಆಸ್ಪತ್ರೆಯಲ್ಲಿ ಮುಂದುವರೆದ ಚಿಕಿತ್ಸೆ ಪಡೆದ ಬಗ್ಗೆ ಉಲ್ಲೇಖಿಸಿದ್ದು ಈ ಬಗ್ಗೆ ಯಾವದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಎಂ ಎಸಿ ನಂಃ727/2022 ರ ಅರ್ಜಿದಾರರಿಗೆ ಯಾವದೇ ರೀತಿಯ ಮಾನಸಿಕ ತೊಂದರೆ ಇರದಿದ್ದರೂ ತಾವು ಅವರ ಪರವಾಗಿ ಸಂರಕ್ಷಣೆದಾರರಾಗಿ ನೇಮಕ ಮಾಡಿಸಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ತಮ್ಮ ಮುಖ್ಯ ವಿಚಾರಣೆಯ 5 ನೇ ಪುಟದಲ್ಲಿ ತಿಳಿಸಿರುವ ರೀತಿ ಗಾಯಾಳುವು

ಸಿವಿಲ ಇಂಜನೀಯರಿಂಗ ಡಿಪ್ಲೋಮಾ ಮುಗಿಸಿದ ಬಗ್ಗೆ ಯಾವದೇ ರೀತಿಯ ಶೈಕ್ಷಣಿಕ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಗಾಯಾಳುವು ಕಟ್ಟಡ ಕಟ್ಟುವ ಹಾಗೂ ನೀಲಿ ನಕ್ಷೆ ತಯಾರಿಸುವ ಕೆಲಸದ ಜೊತೆಗೆ ಸಣ್ಣ ಪುಟ್ಟ ಕಟ್ಟಡ ಕೆಲಸವನ್ನು ಮಾಡುತ್ತಿದ್ದರು. ಗಾಯಾಳುವು ಎಲ್ಲೆಲ್ಲಿ ಕಟ್ಟಡ ಕಟ್ಟುವ ಕೆಲಸ ಮಾಡಿರುತ್ತಾರೆಂಬ ಬಗ್ಗೆ ದಾಖಲೆಗಳನ್ನು ಒದಗಿಸಿರುತ್ತೇನೆ. 40 ಸಾವಿರ ರೂ ಗಳ ಸಂಬಳವು ಕೆಲವೊಮ್ಮೆ ನಗದು ರೂಪದಲ್ಲಿ ಮತ್ತು ಬ್ಯಾಂಕ ಖಾತೆ ಮುಖಾಂತರ ಗಾಯಾಳುವಿಗೆ ಜಮಾ ಆಗುತ್ತಿತ್ತು. ಬ್ಯಾಂಕ ಸ್ಟೇಟಮೆಂಟನ್ನು ಹಾಜರುಪಡಿಸಲು ಯಾವದೇ ರೀತಿಯ ತೊಂದರೆ ಇರುವದಿಲ್ಲ. ಗಾಯಾಳುವಿಗೆ ತಾವು ಹೇಳುವ ರೀತಿ ಯಾವದೇ ತೊಂದರೆ ಇರುವದಿಲ್ಲ ಹಾಗೂ ಯಾವದೇ ರೀತಿಯಾಗಿ ಕೆಲಸ ಮಾಡದಿದ್ದರೂ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ -**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.

<u>**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**</u>

<u>**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**</u>

**MVC**-725/2022 **PW**:2

**ದಿಃ 30.11.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 4 ನೇ ಎದುರುದಾರ ಪರ ಶ್ರೀ ಎಸ್ ಜೆ ಬಿ ವಕೀಲರಿಂದ ಃ**

**3.** ನಾನು ಬಿಕಾಂ ಪದವೀಧರಳಾಗಿರುತ್ತೇನೆ. ನಾನು ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದೇನೆ. ನಾನು ಅರ್ಜಿಯನ್ನು ಹಾಕಲು ಮಾಹಿತಿಯನ್ನು ನನ್ನ ವಕೀಲರಾದ ಶ್ರೀ ಆಂಜನೇಯ ವಕೀಲರಿಗೆ ಕೊಟ್ಟಿರುತ್ತೇನೆ. ನಾನು ದಿನಾಂಕಃ 27.11.1974 ರಲ್ಲಿ ಜನಿಸಿರುತ್ತೇನೆ. ನಾನು ನನ್ನ ಜನ್ಮ ದಿನಾಂಕವನ್ನು ತೋರಿಸಲು ಯಾವದೇ ದಾಖಲೆಗಳನ್ನು ಕೊಟ್ಟಿಲ್ಲ ಆದರೆ ಆದಾರ ಕಾರ್ಡ ಕೊಟ್ಟಿರುತ್ತೇನೆ. ತಮ್ಮ ವಯಸ್ಸು ಅಪಘಾತದ ಸಮಯದಲ್ಲಿ 48 ಆಗಿತ್ತು ಎಂದು ತಿಳಿಸಿರುವದು ಸುಳ್ಳು ಎಂದರೆ ಸರಿಯಲ್ಲ. ನಾನು ಈಗ ದಾರವಾಡದ ಕೆ ಇ ಬೋರ್ಡ ನಲ್ಲಿರುವ ಸೆಂಟ್ರಲ ಸ್ಕೂಲನಲ್ಲಿ ಸಹಶಿಕ್ಷಕಿ ಎಂದು ಕೆಲಸ ಮಾಡುತ್ತಿದ್ದೇನೆ. ಸದರಿ ಸಂಸ್ಥೆಯು ಖಾಸಗಿ ಸಂಸ್ಥೆಯಾಗಿದ್ದು ಸರಕಾರದಿಂದ ಯಾವದೇ ಸವಲತ್ತು ಸಿಗುವದಿಲ್ಲ ಎಂದರೆ ಸರಿ. 2014 ರಿಂದ ನಾನು ಸದರಿ ಶಾಲೆಯಲ್ಲಿ ಸಹಶಿಕ್ಷಕಿಯಾಗಿ ಕೆಲಸ ಮಾಡುತ್ತಾ ಬಂದಿರುತ್ತೇನೆ. ಇದಕ್ಕಿಂತ ಪೂರ್ವದಲ್ಲಿ ನಾನು ದಾರವಾಡದ ಪವನ ಇಂಗ್ಲೀಷ ಮೀಡಿಯಂ ಸ್ಕೂಲ , ಕೆ ಪಿ ಇ ಎಸ್ ಶಾಲೆಯಲ್ಲಿ ಸಹ ಶಿಕ್ಷಕಿಯಾಗಿ ಕೆಲಸ ಮಾಡಿದ್ದೆ. ಕೆ ಇ ಬೋರ್ಡಗೆ ಸಹಶಿಕ್ಷಕಿಯಾಗಿ ಸೇರಿದೆ ಎಂದು ತೋರಿಸಲು ಯಾವದೇ ಅಪಾಯಂಟಮೆಂಟ ಆರ್ಡರ ಹಾಗೂ ಸಂಬಳದ ಚೀಟಿಗಳನ್ನು ಹಾಜರುಪಡಿಸಿರುವದಿಲ್ಲ ಎಂದರೆ ಸರಿಯಲ್ಲ. ತಾವು 15400/- ರೂ ಗಳನ್ನು ಸಂಬಳ ಪಡೆಯುತ್ತಿದ್ದೀರಿ ಎಂದು ತೋರಿಸಲು ಸಾಕ್ಷಿಯು ಸಂಬಳ ಚೀಟಿ ಕೊಟ್ಟಿರುತ್ತೇನೆಂದು ನುಡಿಯುತ್ತಾರೆ.

4. ಅಪಘಾತವು ದಿಃ20.03.2022 ರಂದು ಆಗಿರುತ್ತದೆ. ನಾವು ದಾರವಾಡದಿಂದ ಮಂತ್ರಾಲಯಕ್ಕೆ ಹೋಗಿದ್ದು ವಾಪಸು ಬರಬೇಕಾದರೆ ಅಂದರೆ ಕೊಪ್ಪಳದಿಂದ ಬರಬೇಕಾದರೆ ಅಪಘಾತವಾಗಿರುತ್ತದೆ. ನಾವು ಇನ್ನೋವಾ ಕಾರನಲ್ಲಿ ಹೋಗುತ್ತಿದ್ದೆವು. ಸದರಿ ಕಾರಿನಲ್ಲಿ ಒಟ್ಟು 7 ಜನ ಪ್ರಯಾಣಿಸುತ್ತಿದ್ದೆವು. ನಮ್ಮ ಮಗನ ಹೆಸರು ಶ್ರೀಪೂರ್ಣ ಎಂದರೆ ಸರಿ. ಈ ವ್ಯಕ್ತಿಯೇ ದೂರನ್ನು ಕೊಟ್ಟಿರುತ್ತಾರೆಂದರೆ ಸರಿ. ಅವರು ನೀಡಿದ ದೂರಿನ ವಿಚಾರಗಳು ಗೊತ್ತಿರುತ್ತವೆ. ಸದರಿ ದೂರಿನಲ್ಲಿರುವ ಎಲ್ಲಾ

ವಿಚಾರಗಳು ಸತ್ಯ ಸಂಗತಿಯಿಂದ ಕೂಡಿರುತ್ತವೆ. ಸಾಕ್ಷಿಗೆ ನಿಪಿ 2 ನ್ನು ಓದಿ ತಿಳಿಸಿದಾಗ ಸಾಕ್ಷಿಯು ಅಂಶಗಳನ್ನು ಕೇಳಿ ಸರಿ ಇರುತ್ತವೆಂದು ನುಡಿಯುತ್ತಾರೆ. ತಮ್ಮ ಮಗ ಶ್ರೀಪೂರ್ಣ ರವರು ದೂರಿನಲ್ಲಿ ಕಾರಿನ ಚಾಲಕನ ತಪ್ಪಿನಿಂದ ಅಪಘಾತವಾಗಿದೆ ಎಂದು ತಿಳಿಸಿರುತ್ತಾರೆಂದರೆ ಸರಿ.

5. ನಾನು ಕಾರಿನ ಹಿಂಬಾಗದಲ್ಲಿ ಕುಳಿತಿದ್ದೆ. ಹಿಂದೆ ಕುಳಿತಿದ್ದರೂ ಮುಂದೆ ಆಗುವ ಸಂಗತಿಗಳು ಗೊತ್ತಾಗುತ್ತಿದ್ದು ತಶಮಗೆ ಚಾಲಕ ಯಾವ ರೀತಿ ಚಾಲನೆ ಮಾಡುತ್ತಿದ್ದ ಎಂಬ ಬಗ್ಗೆಗೊತ್ತಾಗುತ್ತಿತ್ತು ಎಂದರೆ ಸರಿ. ಚಾಲಕನ ಪಕ್ಕದಲ್ಲಿನನ್ನ ಮನೆಯವರು ಕುಳಿತಿದ್ದರು. ನಾವು ಕಾರಿನ ಚಾಲಕನಿಗೆ ಜೋರಾಗಿ ಚಲಾಯಿಸಬೇಡ ನಿಧಾನವಾಗಿ ಚಲಾಯಿಸಿ ಎಂದು ತಿಳಿಸಿದ್ದೆವು.

6. ಅಪಘಾತ ರಸ್ತೆಯು ರಾಷ್ಟ್ರೀಯ ಹೆದ್ದಾರಿಯಾಗಿರುತ್ತದೆಂದರೆ ಸರಿ. ಸದರಿ ರಸ್ತೆಯು ಚತುಷ್ಪತ ರಸ್ತೆಯಾಗಿತ್ತು ಎಂದರೆ ಸರಿ. ರಸ್ತೆಯ ಅಗಲವು ತಲಾ 15 ಅಡಿ ಅಗಲ ಇತ್ತು ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ಮಹಜರನ್ನು ನೋಡಿ ಹೌದು ಎನ್ನುತ್ತಾರೆ. ರಾಷ್ಟ್ರೀಯ ಹೆದ್ದಾರಿಗಳಲ್ಲಿ ವಾಹನ ಸಂಚಾರ ಹೆಚ್ಚಾಗಿರುತ್ತದೆಂದರೆ ಸರಿ. ಅಪಘತವಾದ ರಸ್ತೆಯ ಎಡಬಾಗದಲ್ಲಿ ಭಾರತ ಪೆಟ್ರೋಲ ಪಂಪ ಇತ್ತು ಎಂದರೇ ಸರಿ. ಸದರಿ ಪಂಪ 24 ಘಂಟೆ ಚಾಲೂ ಇರುತ್ತದೆಂದರೆ ಸರಿ. ಸದರಿ ಪೆಟ್ರೋಲ ಪಂಪ ಸುತ್ತಮುತ್ತಲೂ ಸಾಕಷ್ಟು ಬೀದಿ ದೀಪಗಳು ಇರುತ್ತವೆಂದರೆ ಸಾಕ್ಷಿಯು ನಾನು ಅಷ್ಟಾಗಿ ಗಮನಿಸಲಿಲ್ಲ ಎನ್ನುತ್ತಾರೆ. ಸದರಿ ಪೆಟ್ರೋಲ ಪಂಪ ಬಳಿ ಲೈಟ ಇತ್ತು ಎಂದರೇ ಸಾಕ್ಷಿಯು ನಾನು ಅಪಘಾತವಾದ ನಂತರ ಕೆಳಗೆ ಇಳಿದು ನಂತರ ಸದರಿ ಲೈಟ ನೋಡಿರುತ್ತೇವೆ ಎನ್ನುತ್ತಾರೆ. ಪ್ರತಿಯೊಬ್ಬ ಚಾಲಕನಿಗೂ ಆತನ ಲೈಟನಿಂದ 200 ಮೀಟರ ದೂರದಲ್ಲಿರುವ ವಾಹನವು ಸಹ ಗೊತ್ತಾಗುತ್ತದೆಂದರೆ ಸಾಕ್ಷಿಯು ಗೊತ್ತಾಗಬಹುದು ಆದರೆ ನನಗೆ ಚಾಲನೆ ಬಗ್ಗೆ ಅಷ್ಟೊಂದು ಮಾಹಿತಿ ಇಲ್ಲ ಎನ್ನುತ್ತಾರೆ. ಲಾರಿಯು ಪೆಟ್ರೋಲ ಪಂಪನ ಮುಂಬಾಗದಲ್ಲಿ ಇತ್ತು ಎಂದರೆ ಸಾಕ್ಷಿಯು ನಾನು ನಿದ್ದೆ ಮಂಪರನಲ್ಲಿದ್ದು ನನಗೆ ಅದು ಎಲ್ಲಿತ್ತು ಎಂದು ಗೊತ್ತಾಗಲಿಲ್ಲ ಹಾಗೂ ಅಪಘಾತವಾದ ನಂತರ ನನ್ನ ಮಾನಸಿಕ ಸ್ಥಿತಿಯು ಅಕ್ಕಪಕ್ಕದಲ್ಲಿ ಏನಿದೆ ಎಂದು ತಿಳಿಯುವಷ್ಟು ಸಾಮರ್ಥದಿಂದ ಕೂಡಿರಲಿಲ್ಲ ಎನ್ನುತ್ತಾರೆ. ನಾನು ಪೊಲೀಸ ದಾಖಲೆಗಳ ಮೇಲೆ ಅರ್ಜಿಯನ್ನು ಸಲ್ಲಿಸಿರುತ್ತೀರಿ ಎಂದರೆ ಸರಿ. ನಮ್ಮ ಚಾಲಕ ಸ್ಕಾರಪಿಯೋ ವಾಹನವನ್ನು ತಪ್ಪಿಸಲು ಲಾರಿಗೆ ಡಿಕ್ಕಿಪಡಿಸಿರುತ್ತಾರೆಂದರೆ ಸರಿ. ತಾವು ಹಾಜರುಪಡಿಸಿರುವ ಸ್ಕೆಚ್ಚನ್ನು ನೋಡಿ ಅಪಘಾತ ಯಾವ ರೀತಿ ಆಯಿತು ಎಂದು ಹೇಳಬಹುದಾ ಎಂದರೆ ಸಾಕ್ಷಿಯು ಗೊತ್ತಾಗುತ್ತಿಲ್ಲ ಎನ್ನುತ್ತಾರೆ. ಲಾರಿಯು ಪೆಟ್ರೋಲ ಪಂಪನ ಆವರಣದಲ್ಲಿ ಇತ್ತು ಎಂದರೆ ಸಾಕ್ಷಿಯು ರಸ್ತೆಯಲ್ಲಿತ್ತು ಎಂದು ನುಡಿಯುತ್ತಾರೆ. ತಮ್ಮ ವಾಹನದ ಚಾಲಕ ಲಾರಿಯ ಹಿಂಬಾಗದ ಬಲಬಾಗದ ಲೈಟಗೆ ಡಿಕ್ಕಿಪಡಿಸಿರುತ್ತಾರೆಂದರೆ ಗೊತ್ತಿಲ್ಲ. ಕಾರು ಚಾಲಕನ ಮೇಲೆ

ಪೊಲೀಸರು ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆಂದರೆ ಸರಿ. ಒಂದು ವೇಳೆ ಲಾರಿಯು ಇರದಿದ್ದರೆ ತಮ್ಮ ವಾಹನದ ಚಾಲಕ ಪೆಟ್ರೋಲ ಪಂಪನ ಆವರಣಕ್ಕೆ ಡಿಕ್ಕಿಪಡಿಸುತ್ತಿದ್ದರು ಎಂದರೆ ಸಾಕ್ಷಿಯು 2 ಇಂಚಿನ ಕಲ್ಲು ಇರಬಹುದು ನಾನು ಗಮನಿಸಲಿಲ್ಲ ಎನ್ನುತ್ತಾರೆ. ಲಾರಿಯು ಪೆಟ್ರೋಲ ಪಂಪನ ಆವರಣದಲ್ಲಿ ಇದ್ದ ಕಾರಣ ಸಾವು ನೋವು ಕಡಿಮೆಯಾಗಿರುತ್ತದೆಂದರೆ ಸರಿಯಲ್ಲ. ತಾವು ತಮಂ ಅರ್ಜಿಯಲ್ಲಿ ಮತ್ತು ಸಾಕ್ಷ್ಯದಲ್ಲಿ ತಿಳಿಸಿರುವಂತೆ ಲಾರಿ ಚಾಲಕ ಯಾವದೇ ಮುನ್ಸೂಚನಾ ದೀಪಗಳನ್ನು ಹಾಕದೇ ಹಾಗೂ ಯಾವದೇ ಸೂಚನೆ ಇಲ್ಲದೇ ನಿಲ್ಲಿಸಿದ್ದ ಎಂದು ತಿಳಿಸಿರುವದು ಸುಳ್ಳು ಎಂದರೆ ಸರಿಯಲ್ಲ. ಅಪಘಾತವು ಸಂಪೂರ್ಣವಾಗಿ ಕಾರು ಚಾಲಕನ ತಪ್ಪಿನಿಂದ ಆಗಿದ್ದರೂ ತಾವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

7. ತಮಗೆ ಆಸ್ಪತ್ರೆಯಲ್ಲಿ ಒಳ್ಳೇ ಚಿಕಿತ್ಸೆ ನೀಡಿ ಬಿಡುಗಡೆ ಮಾಡಿರುತ್ತಾರೆಂದರೆ ಸರಿ. ತಮಗೆ ಈಗ ಯಾವದೇ ರೀತಿಯ ತೊಂದರೆ ಇಲ್ಲ ಎಂದರೆ ಸರಿಯಲ್ಲ. ತಾವು ಮೊದಲಿನಂತೆ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದು ತಮ್ಮ ಸಂಬಳದಲ್ಲಿ ಯಾವದೇ ರೀತಿಯ ಕಡಿಮೆಯಾಗಿಲ್ಲ ಎಂದರೆ ಸರಿ. ತಾವು ತಮ್ಮ ಮುಖ್ಯ ವಿಚಾರಣೆಯ 4 ನೇ ಪ್ಯಾರಾದಲ್ಲಿ ತಿಳಿಸಿರುವ ರೀತಿ 4000/- ಗಳನ್ನು ಕೆಲಸದಾಕಿಗೆ ನೀಡುತ್ತಿದ್ದೀರಿ ಎಂದು ತಿಳಿಸಿರುವದು ಸುಳ್ಳು ಎಂದರೆ ಸರಿಯಲ್ಲ. ತಾವು ಮುಂದಿನ ಚಿಕಿತ್ಸೆಗಾಗಿ ಹಣದ ಅಗತ್ಯ ಇದೆ ಎಂದು ತಿಳಿಸಿರುವದು ಸುಳ್ಳು ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶಕ್ಕಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಲಾರಿಗೆ ಪರ್ಮಿಟ ಮತ್ತು ಚಾಲಕನಿಗೆ ಚಾಲನಾ ಪತ್ರ ಇರದ ಕಾರಣ 4 ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರು ಅಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ -**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.

<u>1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು</u>

<u>ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ</u>

**MVC**-725/2022 **PW**: 3

**ದಿಃ 30.11.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 4 ನೇ ಎದುರುದಾರ ಪರ ಶ್ರೀ ಎಸ್ ಜೆ ಬಿ ವಕೀಲರಿಂದ**

**3.** ನನಗೆ 77 ವರ್ಷ ವಯಸ್ಸಾಗಿರುತ್ತದೆ. ನನ್ನ ಮನೆನಯ ಜವಾಬ್ದಾರಿಯನ್ನು ಮಕ್ಕಳೇ ನೋಡಿಕೊಳ್ಳುತ್ತಿದ್ದು ನಾನು ಮನೆಯಲ್ಲಿ ದೇವರ ಜಪ ಮಾಡಿಕೊಂಡಿರುತ್ತೇನೆಂದರೆ ಸರಿ. ಮನೆಯಲ್ಲಿ ತಾವು ಅಡುಗೆಗೆ ಸಹಾಯ ಮಾಡುತ್ತೀರಿ ಎಂದು ತಿಳಿಸಿರುವದು ಸುಳ್ಳು ಎಂದರೆ ಸರಿಯಲ್ಲ.

4. ನಾನು ನಿದ್ದೆಮಂಪರಿನಲ್ಲಿದ ಕಾರಣ ಅಪಘಾತ ಯಾವ ರೀತಿ ಎಂಬುದು ನನಗೆ ಗೊತ್ತಿಲ್ಲ. ಈ ವಿಚಾರವನ್ನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಎಂದರೆ ಗೊತ್ತಿಲ್ಲ. ಕಾರಿನ ಚಾಲಕನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸಾಕ್ಷಿಯು ನಾನು ನಿದ್ದೆಯಲ್ಲಿದ್ದ ಕಾರಣ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಲಾರಿ ತಪ್ಪಿನಿಂದ ಯಾವದೇ ರೀತಿಯಾಗಿ ಅಪಘಾತವಾಗಿಲ್ಲ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ತಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಲಾರಿ ಚಲಾಕನ ತಪ್ಪನಿಂದ ಅಪಘಾತವಾಗಿದೆ ಎಂದು ತಿಳಿಸಿರುವದು ಸುಳ್ಳು ಎಂದರೆ ಗೊತ್ತಿಲ್ಲ. ತಮಗೆ ಆಸ್ಪತ್ರೆಯಲ್ಲಿ ಒಳ್ಳೇಯ ಚಿಕಿತ್ಸೆ ನೀಡಿ ಬಿಡುಗಡೆ ಮಾಡಿರುತ್ತಾರೆಂದರೆ ಸರಿ. ತಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದ 2 ನೇ ಪ್ಯಾರಾದಲ್ಲಿ ತಿಳಿಸಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ತಮಗೆ ಮುಂದಿನ ಚಿಕಿತ್ಸೆಗಾಗಿ ಒಂದು ಲಕ್ಷ ರೂ ಗಳ ಖರ್ಚು ಆಗುತ್ತದೆಂದು ತಿಳಿಸಿರುವದು ಸಹ ಸುಳ್ಳು ಎಂದರೆ ಸರಿಯಲ್ಲ. ತಮಗೆ ಆಸ್ಪತ್ರೆ ಖರ್ಚು ಎಂದು 10 ಲಕ್ಷ ಬಂದಿದೆ ಎಂದು ತಿಳಿಸಿರುವದು ಸಹ ಸುಳ್ಳು ಎಂದರೆ ಸರಿಯಲ್ಲ. ತಾವು ಪರಿಹಾರ ಪಡೆಯುವ ಉದ್ದೇಶಕ್ಕಾಗಿ ಸುಳ್ಳುದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ತಾವು ಯಾವದೇ ರೀತಿಯಾಗಿ ದುಡಿಯದೇ ಮನೆಯಲ್ಲಿರುವ ಕಾರಣ ತಮಗೆ ಯಾವದೇ ಆದಾಯ ಇಲ್ಲ ಎಂದರೆ ಸಾಕ್ಷಿಯು ಮೌನವಾಗಿರುತ್ತಾರೆ. ಲಾರಿಯ ಚಾಲಕನಿಗೆ ಚಾಲನಾ ಪತ್ರ ಇರದ ಕಾರಣ ಹಾಗೂ ಲಾರರಿಗೆ ಪರ್ಮಿಟ ಇರದ ಕಾರಣ 4 ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರು ಅಲ್ಲ ಎಂದರೆ ಸರಿಯಲ್ಲ. ನನಗೆ ವೈಯಕ್ತಿಕವಾಗಿ ಅಪಘಾತ ಯಾವ ರೀತಿ ಆಯಿತು ಎಂಬುದು ಗೊತ್ತಿಲ್ಲ ಎಂದರೆ ಸರಿ.

**ಮರು ವಿಚಾರಣೆ ಇಲ್ಲಾ -**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.

**ದಿಃ 30.11.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 4 ನೇ ಎದುರುದಾರ ಪರ ಶ್ರೀ ಎಸ್ ಜೆ ಬಿ ವಕೀಲರಿಂದ**

**3.** ನನಗೆ 77 ವರ್ಷ ವಯಸ್ಸಾಗಿರುತ್ತದೆ. ನನ್ನ ಮನೆಯ ಜವಾಬ್ದಾರಿಯನ್ನು ಮಕ್ಕಳೇ ನೋಡಿಕೊಳ್ಳುತ್ತಿದ್ದು ನಾನು ಮನೆಯಲ್ಲಿ ದೇವರ ಜಪ ಮಾಡಿಕೊಂಡಿರುತ್ತೇನೆಂದರೆ ಸರಿ. ಮನೆಯಲ್ಲಿ ನಾನು ಯಾವದೇ ಕೆಲಸವನ್ನು ಮಾಡುತ್ತಿಲ್ಲ. ಅಪಘಾತದ ಪೂರ್ವದಲ್ಲಿ ಮತ್ತು ನಂತರದಲ್ಲಿ ತಮಗೆ ಯಾವದೇ ಆದಾಯ ಇರಲಿಲ್ಲ ಎಂದರೆ ಸರಿ. ತಮ್ಮ ಪ್ರಮಾಣ ಪತ್ರದ 3 ನೇ ಖಂಡಿಕೆಯಲ್ಲಿ ತಿಳಿಸಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

4. ನಾನು ನಿದ್ದೆಮಂಪರಿನಲ್ಲಿದ ಕಾರಣ ಅಪಘಾತ ಯಾವ ರೀತಿ ಎಂಬುದು ನನಗೆ ಗೊತ್ತಿಲ್ಲ. ಅಪಘಾತವನ್ನು ತಮ್ಮ ಸೊಸೆ ನೋಡಿರುತ್ತಾರೆಂದರೆ ಸಾಕ್ಷಿಯು ನನಗೆ ನಿದ್ದೆ ಬಂದಿದ್ದ ಕಾರಣ ಹಾಗೂ ಅವರು ನಮ್ಮ ಜೊತೆ ಇದ್ದ ಕಾರಣ ನೋಡಿರಬಹುದು ಎಂದು ಭಾವಿಸುತ್ತೇನೆ. ಅಪಘಾತವು ಕಾರು ಚಾಲಕನ ತಪ್ಪಿನಿಂದಾಗಿದೆ ಎಂದರೆ ಸಾಕ್ಷಿಯು ನಾನು ನಿದ್ದೆ ಮಾಡುತ್ತಿದ್ದ ಕಾರಣ ಯಾವ ರೀತಿ ಆಯಿತು ಎಂಬುದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಲಾರಿ ತಪ್ಪಿನಿಂದಲೂ ಅಪಘಾತವಾಗಿಲ್ಲ ಎಂದರೆ ಸಾಕ್ಷಿಯು ನಿದ್ದೆಯಲ್ಲಿದ್ದ ಕಾರಣ ಗೊತ್ತಿಲ್ಲ ಎನ್ನುತ್ತಾರೆ. ತಮಗೆ ಎಲ್ಲಾ ರೀತಿಯಾಗಿ ಚಿಕಿತ್ಸೆಯನ್ನು ಕೊಟ್ಟ ನಂತರ ಆರಾಮಾದ ನಂತರ ಬಿಡುಗಡೆ ಮಾಡಿರುತ್ತಾರೇಂದರೆ ಸಾಕ್ಷಿಯುು ಈಗಲೂ ಸಹ ನನಗೆ ಎಡ ಮತ್ತು ಬಲ ಬದಿಯಲ್ಲಿ ತಿರುಗಲು ತೊಂದರೆಯಾಗುತ್ತದೆ ಎಂದು ನುಡಿಯುತ್ತಾರೆ. ತಮಗೆ 5 ಲಕ್ಷ ರೂ ಗಳ ಖರ್ಚು ಆಗಿದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ತಮಗೆ 2 ಲಕ್ಷ ರೂ ಗಳ ಹಣ ಮುಂದಿನ ಚಿಕಿತ್ಸೆಗಾಗಿ ಅಗತ್ಯ ಇದೆ ಎಂದು ತಿಳಿರುವದು ಸುಳ್ಳು ಎಂದರೆ ಸರಿಯಲ್ಲ. ತಾವು ಸುಳ್ಳು ದಾಖಲೆಗಳಣನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಲಾರಿ ಚಾಲಕನಿಗೆ ಚಾಲನಾ ಪತ್ರ ಇರದ ಕಾರಣ ಹಾಗೂ ಲಾರಿಗೆ ಪರ್ಮಿಟ ಇರದ ಕಾರಣ 4 ನೇ ಎದುರುದಾರರು ಪರಿಹಾರ ಕೊಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ -**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.